2. *ಬೀಳಗಿ ತಾಲ್ಲೂಕಿನ ಲಿಂಗಾಪುರ ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸದಿರಲು ಕಾರಣಗಳೇನು?*

3. *ಸದರೀ ಯೋಜನೆಯನ್ನು ಎಂದಿನಿಂದ ಪ್ರಾರಂಭಸಲಾಗುವುದು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

1) ಕರ್ನಾಟಕ ಸಮಗ್ರ ಕೆರೆಗಳ ಅಭಿವೃದ್ಧಿ ಕಾರ್ಯಕ್ರಮದ ಪ್ರಸ್ತಾವನೆಗೆ ವಿಶ್ವಬ್ಯಾಂಕ್‌ನ ನೆರವು ಮಂಜೂರಾದ ಕೂಡಲೇ ಪ್ರಾರಂಭಿಸಲಾಗುವುದು.

2) ಮತ್ತು 3) ಬೀಳಗಿ ತಾಲ್ಲೂಕು ಲಿಂಗಾಪುರ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಪ್ರಾರಂಭಿಸುವ ಸಲುವಾಗಿ ಎರಡು ಭಾರಿ ಟೆಂಡರ್ ಕರೆಯಲಾಗಿದ್ದು, ಯಾವುದೇ ಗುತ್ತಿಗೆದಾರರೂ ಮುಂದೆ ಬಂದಿರುವುದಿಲ್ಲ. ಈಗ ಮೂರನೇ ಬಾರಿ ಟೆಂಡರು ಕರೆದಿದ್ದು, ಎರಡು ಟೆಂಡರುಗಳು ಬಂದಿದ್ದು ಅವು ಸರ್ಕಾರದ ಪರಿಶೀಲನೆಯಲ್ಲಿದೆ.

ಬಾಲ ಖೈದಿಗಳಿಗೆ ಶಿಕ್ಷಣ

3290 - ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಬಾಲ ಖೈದಿಗಳ ಸಂಖ್ಯೆ ಎಷ್ಟು?*

ಆ) *ಕಾರಾಗೃಹಗಳಲ್ಲಿ ಖೈದಿಗಳಿಗೆ ಶಿಕ್ಷಣ ಪಡೆಯಲು ಎಲ್ಲಿಯವರೆಗೆ ಅವಕಾಶವಿದೆ?*

ಇ) *ಬಾಲ ಖೈದಿಗಳಲ್ಲಿ ಯಾರಾದರೂ ಕಾರಾಗೃಹಗಳಲ್ಲಿ ಇದ್ದುಕೊಂಡು ಶಿಕ್ಷಣವನ್ನು ಪಡೆಯುತ್ತಿದ್ದಾರೆಯೇ?*

ಈ) *ಹಾಗಿದ್ದಲ್ಲಿ ಅವರ ಸಂಖ್ಯೆ ಎಷ್ಟು?*

ಉ) *ಶಿಕ್ಷಣವನ್ನು ಪಡೆದುಕೊಂಡು ನಂತರ ಅವರ ಶಿಕ್ಷೆ ಅವಧಿ ಮುಗಿದ ನಂತರ ಯಾರಾದರೂ ಸರ್ಕಾರಿ ನೌಕರಿಯನ್ನು ಪಡೆದುಕೊಂಡಿದ್ದಾರೆಯೇ ವಿವರಣೆ ನೀಡಬೇಕು?*

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಇಲ್ಲ.

ಆ) ಅರ್ಹ ಕೈದಿಗಳಿಗೆ ಪದವಿ ಮಟ್ಟದವರೆಗೆ ಮತ್ತು ವೃತ್ತಿ ಶಿಕ್ಷಣವನ್ನು ಪಡೆಯುವ ಅವಕಾಶ ಕಲ್ಪಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಇಲ್ಲ.